ಆಗುತ್ತಿರಲಿಲ್ಲ. ಆವತ್ತು ಹಾಲು ಕರೆಯಲಿಲ್ಲ. ನಾನು ಬೇಕೆಂದೇ ಕರುವನ್ನು ಬಿಟ್ಟೆ. ಅದು ಹಾಲೆಲ್ಲಾ ಕುಡಿದು ಮುಗಿಸಿತ್ತು. ಅನಂತರ ಬೇಕು ಬೇಕೆಂದೇ ಹಾಲು ಬಿಸಿ ಮಾಡಿಕೊಡು ಎಂದು ಕೇಳಿದೆ. ಪಾಪ, ತಂಬಿಗೆ ತೆಗೆದುಕೊಂಡು ಹಟ್ಟಿಗೆ ಹೋದವಳು ಹಾಗೇ ಹಿಂತಿರುಗಿದ್ದಳು. ನಾನು ಧ್ವನಿ ಏರಿಸಿದ್ದೆ.

"ಇಷ್ಟು ಹೊತ್ತು ತಡ ಮಾಡಿ ಬರುವುದಕ್ಕೆ ಏನು ಕಾರಣ ಇತ್ತೋ?... ಹುಲ್ಲು ಬೇರೆ ತಂದಿಲ್ಲ. ನಮಗೆ ದನ ಬೇರೆ ಕೇಡು. ಮನುಷ್ಯರಿಗೇ ಕೇಳುವವರಿಲ್ಲ. ಅಡುಗೆ ಬೇರೆ ಆಗಿಲ್ಲ. ಹಾಲಾದರೂ ಒಂದು ಲೋಟ ಕುಡಿಯಬಹುದು ಎಂದು ಕಾದಿದ್ದೆ" ಬೇಕೆಂದೇ ಹೇಳಿದ್ದೆ. ಅವಳಿಗೆ ಕಿರಿಕಿರಿ ಮಾಡಬೇಕು ಎಂಬ ಕೆಟ್ಟ ಹಟ ನನ್ನಲ್ಲಿ ಮೂಡಿತ್ತು. ಗೊಣಗುತ್ತಾ ಮಲಗಿದ್ದೆ. ಸ್ವಲ್ಪ ಹೊತ್ತಾದಾಗ ಒಂದು ಲೋಟ ಹಾಲು ತಂದು ನನ್ನ ಹತ್ತಿರ ಇಟ್ಟಳು. ನನಗೇ ಅಚ್ಚರಿಯಾಯಿತು! ಒಳಗೆ ಒಂದು ಹನಿ ಹಾಲಿರಲಿಲ್ಲ. ಇದೆಲ್ಲಿಂದ ಬಂತು? ಕೇಳುವುದಕ್ಕೆ ಹೋಗದೇ ಗಟಗಟನೆ ಕುಡಿದುಬಿಟ್ಟೆ. ಯಾಕೋ ಯಾವತ್ತಿನ ರುಚಿ ಇರಲಿಲ್ಲ. ಅಷ್ಟರಲ್ಲಿ ಎಚ್ಚೆತ್ತ ಮಗು ಜೋರಾಗಿ ಹಸಿವಿನಿಂದ ಅಳುತ್ತಿತ್ತು. ಒಲೆಯ ಬಳಿ ಅನ್ನ ಬೇಯಲಿಟ್ಟು ಬೆಂಕಿ ಉರಿಸುತ್ತಿದ್ದ ಅವಳ ಮಡಿಲಿಗೆ ಮಗುವನ್ನು ಎತ್ತಿ ಹಾಕಿದ್ದೆ. ಆ ಕ್ಷಣ ಮಗುವಿಗೂ ನೋವಾಗಬಹುದು ಎಂದು ನನಗೆ ಅನ್ನಿಸಲಿಲ್ಲ. ಅವಳು ಕುಳಿತಲ್ಲಿಯೇ ವಾಲಿದಳು. ನಾನು ಹೋಗಿ ಹಾಸಿಗೆಯಲ್ಲಿ ಬಿದ್ದುಕೊಂಡೆ. ಮಗು ಜೋರಾಗಿ ಅಳುತ್ತಿತ್ತು. ಅದಕ್ಕೆ ಹಾಲುಡಿಸಲು ಏನು ಸಂಕಟ ಇವಳಿಗೆ? ದಿನಾ ಸಂಜೆ ಬಂದ ಕೂಡಲೇ ಹಾಲು ತುಂಬಿದ ಎದೆಯ ಭಾರ ಇಳಿಸಿ ನಿರಾಳವಾಗುತ್ತಿದ್ದಳು. ಮಗುವಿಗೂ ಅದೊಂದು ಸಂಭ್ರಮ. ಆಗೆಲ್ಲಾ ನನಗೆ ಅವಳಲ್ಲಿ ಮತ್ತಷ್ಟು ಪ್ರೀತಿ ಉಕ್ಕುತ್ತಿತ್ತು. ಇಂದು ನನ್ನ ಅಸಹನೆ ಏರುತ್ತಿತ್ತು. ಹೊರಗಿನಿಂದಲೇ ಜೋರಾಗಿ ಕೂಗಿ ಹೇಳಿದ್ದೆ, "ಅದು ನಾಲಗೆ ಕೆಳಗೆ ಇರಿಸದೇ ಅಳುತ್ತಿದೆ, ಹಾಲು ಕುಡಿಸುವುದಕ್ಕೆ ಏನು ಕಷ್ಟ ನಿನಗೆ. ಅದನ್ನೂ ಯಾವನಿಗಾದರೂ ಕೊಟ್ಟು ಬರಿದು ಮಾಡಿ ಬಂದಿದ್ದೀಯಾ ಹೇಗೆ?" ನಾನು ನಿರೀಕ್ಷಿಸದೇ ಇದ್ದ ಮಾತು ನನ್ನ ಬಾಯಿಯಿಂದ ಹೊರಬಂದಿತ್ತು. ಒಂದು ಐದು ನಿಮಿಷ ಕಳೆದಿರಬಹುದು ನನ್ನವಳ ಕಿರುಚಾಟ ಕೇಳಿಸಿದಾಗ ಎದ್ದು ಕುಂಟುತ್ತಾ ಹೋಗಿದ್ದೆ. ತಾಯಿ ಮಗು ಇಬ್ಬರ ದೇಹಕ್ಕೆ ಬೆಂಕಿ ಹತ್ತಿಕೊಂಡು ಧಗಧಗನೆ ಉರಿಯುತ್ತಿತ್ತು. ಬೊಬ್ಬೆ ಹಾಕಿದೆ. ನೆರೆಕರೆಯವರು ಓಡಿ ಬಂದರು. ಆದರೆ, ಇಬ್ಬರನ್ನೂ ಉಳಿಸಿಕೊಳ್ಳಲಾಗಲಿಲ್ಲ ನನಗೆ. ಅವರು ಬೆಂದು ಕರಕಲಾಗಿದ್ದರು.



ಆತ ಒಮ್ಮೆ ಮಾತು ನಿಲ್ಲಿಸಿದ್ದ. ನಾನು ನಡಿಗೆ ನಿಲ್ಲಿಸಿದ್ದೆ. ಆತ ಮತ್ತು ಆತ ಹೊತ್ತ ಹುಲ್ಲಿನ ಹೊರೆ ಮಾತ್ರ ನನ್ನ ಎದುರು ಸ್ಪಷ್ಟವಾಗಿ ಕಾಣುತ್ತಿತ್ತು. ಮೆಲ್ಲಗೆ ಭಾರವಾದ ಸ್ವರದಲ್ಲಿ ಪ್ರಶ್ನಿಸಿದೆ.

"ಅವಳು ಬೇಕೆಂದೇ ಆತ್ಮಹತ್ಯೆ ಮಾಡಿಕೊಂಡಳಾ? ಅಂತಹದ್ದು ಏನಾಗಿತ್ತು?" ನನ್ನ ಧ್ವನಿಯಲ್ಲಿ ನೋವಿತ್ತು. ಆತ ಈಗ ತಣ್ಣಗಾಗಿದ್ದ. ಯಾವುದೋ ಸುರಂಗದ ಒಳಗಿಂದ ಎಂಬ ಹಾಗೆ ಸೋತ ಧ್ವನಿ ಬಂತು, "ಗೊತ್ತಿಲ್ಲ. ಆದರೆ, ಮರು ದಿನ ನನ್ನ ಜೊತೆಗೆ ಕೆಲಸ ಮಾಡುತ್ತಿದ್ದ ಸೂರ ಬಂದು ಹೇಳಿದ ಸತ್ಯ ನನ್ನನ್ನು ಜೀವಂತ ಸುಟ್ಟಿತ್ತು. ಅವಳು ಕೆಲಸ ಮಾಡುವಲ್ಲಿ ಸಾಹುಕಾರನ ಭಾವ ಮೈದ ಅವಳ ಹಿಂದೆ ಬಿದ್ದಿದ್ದ. ಆದರೆ, ಆಕೆ ಅವಳ ಪಾಡಿಗೆ ಇದ್ದಳಂತೆ. ಅಂದು ಸಂಜೆ ಆತ ಹೊಂಚು ಹಾಕಿ ಕುಳಿತಿದ್ದ. ಹುಲ್ಲಿನ ಹೊರೆಯ ಜೊತೆ ಬರುತ್ತಿರಬೇಕಾದರೆ ಆಕೆಯನ್ನು ಹಿಂಬಾಲಿಸಿ ಆಕ್ರಮಿಸಿದ್ದ. ಆಕೆ ಬೊಬ್ಬೆ ಹಾಕಿದ್ದಳು. ದಾರಿಹೋಕರು ಯಾರೋ ಓಡಿ ಬಂದಿದ್ದರು. ಜನ ಸೇರಿ ರಾದ್ಧಾಂತವಾಗಿತ್ತು.